ಕೆಡಬೇಡ" ಅಪ್ಪ ಏಕಾಂತದಲ್ಲಿ ಬುದ್ಧಿ ಹೇಳಿದರು.

"ನಿನ್ನ ಅಣ್ಣನೂಕ್ಕೆ ತೊಳೆದುಕೊಂಡ, ಇನ್ನು ನೀನಾದರೂ ನನ್ನ ಮಾತು ಕೇಳಬಾರದಾ? ಮಗೂನ ನಾನೆ ನೋಡ್ಕೊಳ್ತೀನಿ, ಹತ್ತಿರದಲ್ಲೇ ಮನೆ ಮಾಡ್ಕೊಂಡು ಇರಿ" ಅಮ್ಮನ ಪಿರಿಪಿರಿ.

★★★

ನಾನೆಣಿಸಿದಂತೆ ಏನೂ ನಡೆಯಲಿಲ್ಲ. ಮಗ ಹುಟ್ಟಿದ. ನಮ್ಮಿಬ್ಬರ ಹೆಸರಿನ ಮೊದಲ ಅಕ್ಷರ ಜೋಡಿಸಿ 'ಇನ' ಎಂದು ಅಪ್ಪಿದೆ; ಈ ಇಳೆಯ ಬಾಳಿಗೆ ಬೆಳಕಾಗಲಿ ಎಂಬ ದೂರದಾಸೆ! ಅವನು ಅಪ್ಪನ ಮುಖ ನೋಡಲೇ ಇಲ್ಲ. ವರ್ಷದ ಹುಟ್ಟುಹಬ್ಬದ ದಿನ ವಿಚ್ಛೇದನದ ಆದೇಶವಾಗಿತ್ತು.

ಅಲ್ಲಿಗೆ ಎಲ್ಲದರ ಪರಿಸಮಾಪ್ತಿ. ಮುಂದೊಂದು ದಿನ ಜೋಯಿಸರು ಬಂದು ನರೋತ್ತಮನ ಮದುವೆಯಾಯ್ತು ಎಂದಾಗ ಬೆಕ್ಕಿದ್ದೆ; ಆದರೆ ಬಹಳ ತಡವಾಗಿತ್ತು.

★★★

ತಮ್ಮನಿಗೆ ಎಂಜಿನಿಯರಿಂಗ್ ಸೀಟು ಸಿಕ್ಕಾಗ ನಗರಕ್ಕೆ ವರ್ಗ ಮಾಡಿಸಿಕೊಂಡಿದ್ದೆ. ಅಪ್ಪ ನಮ್ಮೊಡನೆ ಬರಲಿಲ್ಲ. ಅಮ್ಮ ನೆರೆಹೊರೆಯವರೊಂದಿಗೆ "ಅಳಿಯ ಘಾರಿನ್ನು ಅದಕ್ಕೆ ಮಗಳ ಜೊತೆಗೆ ಇದ್ದೇನೆ" ಎಂದು ಹೇಳಿಕೊಂಡು ತೇಪೆ ಹಾಕಿದ್ದಳು ನನ್ನ ಜೀವನಕ್ಕೆ.

ಆಫೀಸಿನ ದಾಖಲೆಗಳಲ್ಲಿದ್ದ 'ಇಳಾ ನರೋತ್ತಮ್' ಹೆಸರನ್ನು ಪುನಃ ಬದಲಾಯಿಸಲಿಲ್ಲ. ಕೊರಳಿನ ತಾಳಿ, ಕಾಲುಂಗುರ ಏನೂ ಬಿಚ್ಚಿರಲಿಲ್ಲ.

ನನ್ನ ವೈಯುಕ್ತಿಕ ವಿಷಯ ಆಪ್ತ ಗೆಳತಿ, ಗೃಹಿಣಿ ವರ್ಷಳಿಗೆ ಬಿಟ್ಟರೆ ಬೇರಾರಿಗೂ ತಿಳಿಯದು.

ಬುದ್ಧಿ ತಿಳಿದ ಮೇಲೆ ಇನ ನನ್ನ ಅಮ್ಮನನ್ನು ಕಂಡರೆ ಸಿಡುಕುತ್ತಿದ್ದ. ''ನನಗೆ ಅಪ್ಪನ ಪ್ರೀತಿ ಸಿಗದಂತೆ ಮಾಡಿದೆ'' ಎಂದು ಕೂಗುತ್ತಿದ್ದ. ನಾನು ಯಾರಿಗೂ ಜವಾಬು ಕೊಡಲಾಗದೆ ಹಿಂಸೆ ಅನುಭವಿಸುತ್ತಿದ್ದೆ. ಒಮ್ಮೊಮ್ಮೆ ನನ್ನ ಮೇಲೂ ಸಿಟ್ಟಾಗುತ್ತಿದ್ದ.

★★★

ಅದೊಂದು ದಿನ ಮನೆಗೆ ಬಂದವನೇ ಇನ, "ಅಮ್ಮ ಇವತ್ತು ನಾನು ಅಪ್ಪನ್ನ ನೋಡಿದೆ, ಮಾತನಾಡಿದೆ. ನನಗಂತೂ ಸ್ವರ್ಗದಲ್ಲಿ ತೇಲ್ತಿರೋ ಹಾಗಿದೆ'' ಎಂದು ಕುಣಿದಾಡಿದ. ಫೋಟೊದಲ್ಲಿ ಕಂಡವರು ಪ್ರತ್ಯಕ್ಷ ಕಂಡಾಗ ಆದ ಸಂಭ್ರಮ. ನಿಧಾನವಾಗಿ ವಿಷಯ ತಿಳಿಯಿತು. ತನ್ನ ಸ್ನೇಹಿತನ ಮನೆಯ ಗೃಹಪ್ರವೇಶಕ್ಕೆ ನರೋತ್ತಮ ಹೋಗಿದ್ದಾನೆ, ಜೋಯಿಸರ ಮೂಲಕ ಪರಿಚಯವಾಗಿದೆ. "ನಿನ್ನ ಹತ್ತಿರ ಏನು ಮುಚ್ಚು ಮರೆ; ನರೋತ್ತಮನಿಗೆ ಅದೆಷ್ಟು ಸಂತೋಷವೋ ತನ್ನ ಕುಡಿಯನ್ನು ನೋಡಿ... ಎರಡನೇ ಮದುವೆ ಆದರೇನು? ಮಕ್ಕಳಾಗಲಿಲ್ಲ. ಹೆಂಡತಿಯ ಅಕ್ಕನ ಮಗಳನ್ನು ದತ್ತು ಪಡೆದಿದ್ದಾನೆ. ಹೀಗಾಗಿ ಇನನನ್ನು ನೋಡಿದ ಕೂಡಲೇ ಅದೇನು ಸಂಭ್ರಮವೋ? ಸಹಜ ಅಲ್ವೇ? ನೀನು ತಪ್ಪು ಮಾಡಿಬಿಟ್ಟೆ ಇಳಾ'' ಎಂಬ ಮುಕ್ತಾಯ ಕೊಟ್ಟಿದ್ದರು ಜೋಯಿಸರು.

★★★

ಇನ, ಅಮೆರಿಕದಲ್ಲಿ ಎಂ.ಎಸ್ ಮಾಡ್ತೀನಿ ಅಂದಾಗ ನರೋತ್ತಮನೇ ಖರ್ಚು ಮಾಡಿದ್ದ. ಅಪ್ಪ ಮಗ ಫೋನ್‌ನಲ್ಲಿ ಹರಟುತ್ತಿದ್ದರು. ನಿಜ, ವಿಚ್ಛೇದನವಾದದ್ದು ಗಂಡ ಹೆಂಡತಿಯರ ಸಂಬಂಧಕ್ಕೆ ಹೊರತು ಅಪ್ಪಮಗನದಲ್ಲವಲ್ಲ?

ಓದು ಮುಗಿಸಿ ಅಲ್ಲೇ ನೌಕರಿ ಸೇರಿ ಇಲ್ಲೊಂದು ಮನೆ ಕೊಂಡು ನನ್ನನ್ನು ಕೂರಿಸಿದ್ದ. ಅಮ್ಮ ಊರಿಗೆ ಹಿಂತಿರುಗಿದ್ದಳು.

ನೌಕರಿ ಬಿಟ್ಟಿದ್ದೆ. ನನ್ನ ಅನುಕೂಲಕ್ಕಾಗುವಷ್ಟು ದುಡ್ಡು ಬಂದಿತ್ತು. ಇಷ್ಟು ದೊಡ್ಡ ಮನೆಗೆ